# 6

# “ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ”

# (9:1-10:1)

ಇಬ್ರಿಯ ಪತ್ರಿಕೆಯನ್ನು ಓದುವಾಗ ಹಳೆ ಒಡಂಬಡಿಕೆಯ, ಮೋಶೆಯ ನಿಯಮಗಳ ಹಾಗೂ, ಹೊಸ ಒಡಂಬಡಿಕೆಯ ಯೇಸು ಕ್ರಿಸ್ತನ ನಡುವೆ ಇರುವ ಸಂಬಂಧವನ್ನು ಸ್ಪಷ್ಟ ವಾಗಿ ತಿಳುಕೊಳ್ಳುತ್ತೇವೆ. ಆ ಸಂಬಂಧದ ಕುರಿತು ಅನೇಕ ವಿಚಾರಗಳನ್ನು ತಿಳಿಸಿಲಾಗಿದೆ. (1) ಹೊಸದು ಹಳೆಯದಕ್ಕಿಂತ ಉತ್ತಮವಾಗಿದೆ, ಅದು ಹೊಸ ನಿಯಮಗಳಿಗಿಂತ ಕೆಳಮಟ್ಟದ್ದಾಗಿದೆ. (2) ಹಳೆ ಒಡಂಬಡಿಕೆಯು ತೆಗೆಯಲ್ಪಟ್ಟು, ಹೊಸದನ್ನು ಹೊಂದಿಕೊಂಡು, ಅದರಲ್ಲೇ ಜೀವಿತವು ಮುಂದುವರೆಯುತ್ತಿದೆ. (3) ಹಳೆ ಒಡಂಬಡಿಕೆಯಲ್ಲಿನ ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಸೇರದೆ ಹೋದ ಅನುಭವದಿಂದ, ಅವಿಧೇಯರಾದರೆ ಕ್ರೈಸ್ತರೂ ಆ ಶಿಕ್ಷೆಯನ್ನು ಹೊಂದುವರು ಎಂಬ ಪಾಠವನ್ನು ಕಲಿಯಬಹುದು.

ಈ ಎರಡರ ನಡುವಿನ ಇನ್ನೊಂದು ಸಂಬಂಧವನ್ನು ಈ ಪಾಠದಲ್ಲಿ ತಿಳಿಸಲಾಗಿದೆ. *ಹಳೆ ಒಡಂಬಡಿಕೆ ಹೊಸ ಒಡಂಬಡಿಕೆಯ ಛಾಯೆಯಾಗಿತ್ತು.* ಇಬ್ರಿಯ 10:1ರಲ್ಲಿ: “ಅದು ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಾಗಿರಲಿಲ್ಲ.[1] ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾ ಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು.”[2] “ಧರ್ಮಶಾಸ್ತ್ರವು ಮೇಲುಗಳ ಛಾಯೆ” ಎಂಬುದನ್ನೇ ಅಧ್ಯಯನ ಮಾಡೋಣ. ಕ್ರಿಸ್ತನ ಒಡಂಬಡಿಕೆಗೆ ಸಂಬಂಧಪಟ್ಟ ವಾಕ್ಯವನ್ನು ಇಬ್ರಿಯ 9ನೇ ಅಧ್ಯಾಯದಿಂದ ನೋಡೋಣ.

## “ಛಾಯೆ” ಯಾಗಿರುವುದೆಂದರೆ ಏನು?

“ಛಾಯೆ” ಎಂದರೆ, ಬರಹಗಾರನ ಪ್ರಕಾರ ಅದರ ಅರ್ಥವೇನು? ಹಳೆಯ ಒಡಂಬಡಿಕೆಯೇ, ವಿವಿಧವಾದ ಛಾಯೆಯನ್ನು ಹೊಂದಿತ್ತು. ಅದು ಮುಂದೆ ಬರಲಿದ್ದ ಹೊಸ ಸಂಗತಿಗಳ ಛಾಯೆಯಾಗಿತ್ತು. ಉದಾಹರಣೆಗೆ ನೀವು ಒಂದು ಎತ್ತರವಾದ ಗೋಡೆಯ ಬದಿಯಲ್ಲಿ ನಡೆಯುವಾಗ, ಅದರ ಮತ್ತೊಂದು ಭಾಗದಲ್ಲಿ, ಹೆಜ್ಜೆಗಳ ಸಪ್ಪಳ ವನ್ನು ಕೇಳತ್ತಿರುವಿರಿ. ಆದರೆ ಆ ಬದಿಯಲ್ಲಿ ಇರುವವರು ಯಾರು ಎಂದು ನೀವುಗಳು ತಿಳಿಯಲಾರಿರಿ, ಹಾಗೂ ಅಲ್ಲಿರುವವನು ಯಾರು ಎಂದು ನಿಖರವಾಗಿ ಹೇಳಲಾರಿರಿ. ನೀವು ಗೋಡೆಯ ತುದಿಗೆ ಬರುವಾಗ ನಿಮ್ಮ ಮುಂದೆ ಮುಂದೆ ಹೋಗುತ್ತಿರುವ ನೆರಳನ್ನು ಗಮನಿಸುತ್ತೀರಿ. ಆಗ ಆ ವ್ಯಕ್ತಿಯನ್ನು ನೋಡದೆ ಇದ್ದರೂ, ಅವನ ನೆರಳಿನಿಂದ ಕೆಲವು ಅಂಶಗಳನ್ನ ಗಮನಿಸುತ್ತಿರಲ್ಲವೇ. ಹಾಗೆಯೇ ಧರ್ಮಶಾಸ್ತ್ರವು ಮುಖ್ಯಾಂಶ ವಾಗಿದ್ದರೂ ಅದರ ಪೂರ್ಣ ತಿಳುವಳಿಕೆಯನ್ನು ಹೊಂದಲು ಅಸಾಧ್ಯ. ಅದರಲ್ಲಿ ಹೊಸ ಒಡಂಬಡಿಕೆಯು ಕೆಲವು ವಿಚಾರಗಳು ಸಹ ಅಡಗಿವೆ.

ಈ ವಿಚಾರದ ಕುರಿತು ಮೂರು ಅಂಶಗಳನ್ನು ಗಮನಿಸೋಣ:

(1) ಹೊಸ ಒಡಂಬಡಿಕೆಯ *ಪ್ರಾಮುಖ್ಯತೆ.* ಕ್ರಿಸ್ತನು ತನ್ನ ಸಭೆಯನ್ನು ಕಟ್ಟಲು ಬಂದಾಗ, ಹಳೆ ಒಡಂಬಡಿಕೆಯ ಕ್ರಮವನ್ನು ಅನುಸರಿಸಲಿಲ್ಲ; ಅದರ ಬದಲಾಗಿ. ದೇವರ ದರ್ಶನದ ಗುಡರಾವೇ ಸಭೆಯ ಚಿತ್ರಣವಾಗಿತ್ತು. ಆದ್ದರಿಂದ ದೇವದರ್ಶನದ ಗುಡಾರದ ನಿರ್ಮಾಣದ

ಮೊದಲೇ, ದೇವರು ಸಭೆಯ ಯೋಜನೆಯನ್ನು ಹೊಂದಿದ್ದನು.

(2) ಹೊಸ ಒಡಂಬಡಿಕೆಯ *ಶ್ರೇಷ್ಟತೆ.* ನಿಜವಾದ ಸಂಗತಿಗಳ, ಛಾಯೆಗಿಂತಲೂ ಅವು ಶ್ರೇಷ್ಟವಾಗಿವೆ.

(3) ಎರಡು ಒಡಂಬಡಿಕೆಗಳ *ಹೋಲಿಕೆ.* ವಸ್ತುವಿನ ನೆರಳು ಸಮವಾಗಿ ಇಲ್ಲದೆ ಹೋದರೂ ಆ ಎರಡಕ್ಕೂ ನಡುವೆ ಕೆಲವು ಹೋಲಿಕೆಗಳಿವೆ. ಅದೇ ವಿಧವಾಗಿ ಎರಡು ಒಡಂಬಡಿಕೆಗಳು ಸಮನಾಗಿ ಇಲ್ಲದಿದ್ದರೂ, ಕೆಲವು ಹೋಲಿಕೆಗಳನ್ನು ಗಮನಿಸಬಹುದು.

## ಧರ್ಮಶಾಸ್ತ್ರವು ಯಾವ ವಿಧವಾದ ಛಾಯೆಯನ್ನು ಹೊಂದಿದೆ?

ಧರ್ಮಶಾಸ್ತ್ರವು ಮೇಲುಗಳ ಛಾಯೆ ಎಂಬುದರ ಕೆಲವು ಮಾರ್ಗಗಳನ್ನು ಗಮನಿಸೋಣ.

| **ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ** | |
|---|---|
| **ಛಾಯೆ** | **ವಾಸ್ತಾವಾಂಶ** |
| **ಪಾತ್ರೆ.** ಪರಿಶುದ್ಧ ಸ್ಥಳದ ಹೊರಗೆ ಇದ್ದ ಪಾತ್ರೆಯಲ್ಲಿ ತೊಳಕೊಂಡ ಯಾಜಕನು ಪರಿಶುದ್ಧ ಸ್ಥಳವನ್ನು ಪ್ರವೇಶಿಸುತ್ತಿದ್ದನು. | **ದೀಕ್ಷಾಸ್ನಾನ.** ದೀಕ್ಷಾಸ್ನಾನದಲ್ಲಿ ನೀರಿನಿಂದ ಜನರು ತಮ್ಮ ಪಾಪಗಳನ್ನು ತೊಳ ಕೊಂಡು ನಮ್ಮ ಪರಿಶುದ್ಧ ಸ್ಥಳವಾದ ಸಭೆಯನ್ನು ಸೇರುವರು. |
| **ಯಜ್ಞವೇದಿ.** ಪರಿಶುದ್ಧ ಸ್ಥಳದ ಹೊರ ಭಾಗದಲ್ಲಿದ ಯಜ್ಞವೇದಿಯಲ್ಲಿ ಪ್ರಾಣಿಗಳನ್ನು ವಧಿಸುತ್ತಿದ್ದರು. | **ಸ್ವಯಜ್ಞ.** ಕ್ರೈಸ್ತರು ಪ್ರಾಣಿಗಳನ್ನು ವಧಿಸದೆ ತಮ್ಮನ್ನೇ ಸಮರ್ಪಿಸಬೇಕಿತ್ತು (ರೋಮಾಪುರ 12:1, 2). |
| **ಯಾಜಕರು.** ನಿಗಧಿತವಾದ ಜನರು ಮಾತ್ರ ಯಾಜಕರಾಗಿದ್ದರು. | **ಕ್ರಿಶ್ಚಿಯನ್.** ಪ್ರತಿ ಕ್ರೈಸ್ತನು ಯಾಜಕನಾಗಿರುವನು (1 ಪೇತ್ರ 2:5, 9). |
| **ಪರಿಶುದ್ಧ ಸ್ಥಳ.** ಗುಡಾರದಲ್ಲಿದ್ದ ಪರಿಶುದ್ಧ ಸ್ಥಾನಕ್ಕೆ ಯಾಜಕನು ಮಾತ್ರ ಪ್ರವೇಶಿ ಸುತ್ತಿದ್ದನು. | **ಸಭೆ.** ಸಭೆಯೆಂಬ ಪರಿಶುದ್ಧ ಸ್ಥಳವನ್ನು ಕ್ರಿಸ್ತನು ಸಂಪಾದಿಸಿರುವದರಿಂದ ಯಾಜಕರು (ಕ್ರೈಸ್ತರು) ಅಲ್ಲಿ ಆರಾಧಿಸುತ್ತಾರೆ. |
| **ದೀಪ.** ಪರಿಶುದ್ಧ ಸ್ಥಳದಲ್ಲಿದ್ದ ದೀಪ ಸ್ಥಂಭದ ಮೇಲೆ ದೀಪವನ್ನಿಟ್ಟಿದ್ದರು. | **ದೇವರ ವಾಕ್ಯ.** ದೇವರ ವಾಕ್ಯದ ಬೆಳಕು ಸಭೆಗೆ ಮಾರ್ಗದರ್ಶನವನ್ನು ನೀಡುತ್ತದೆ. |
| **ರೊಟ್ಟಿ.** ಪರಿಶುದ್ಧ ಸ್ಥಳದಲ್ಲಿ ರೊಟ್ಟಿಯ ಮೇಜನ್ನು ಇಟ್ಟಿದ್ದರು. | **ಕರ್ತನ ಭೋಜನ.** ಕರ್ತನ ಮೇಜಿನಲ್ಲಿ ನಾವು ಪಾಲುಗಾರರು (1 ಕೊರಿಂಥ 10:21). |
| **ಧಲಾರೂಪ.** ಈ ಧೂಪವೇದಿಯಿಂದ ಹೊಗೆಯು, ಅತಿಪರಿಶುದ್ಧ ಸ್ಥಳಕ್ಕೆ ಹೋಗುತ್ತಿತ್ತು. | **ಪ್ರಾರ್ಥನೆ.** ದೂಪಕ್ಕೆ ಪ್ರಾರ್ಥನೆಯು ಹೋಲಿಕೆಯಾಗಿದೆ (ಪ್ರಕಟನೆ 5:8). ಏಕೆಂದರೆ ಅದು ದೇವರ ಸನ್ನಿಧಿಗೆ ಹೋಗುತ್ತದೆ. |
| **ತೆರೆ.** ಪರಿಶುದ್ಧ ಹಾಗೂ ಅತಿಪರಿಶುದ್ಧ ಸ್ಥಳದ ನಡುವೆ ತೆರೆಯಿತ್ತು. | **ಮಾಂಸ.** ಪರಲೋಕದವರನ್ನು ಪ್ರತ್ಯೇಕ ಮಾಡುತ್ತದೆ (ಇಬ್ರಿಯ 10:19, 20). |

| | |
|---|---|
| **ಅತಿಪರಿಶುದ್ಧ ಸ್ಥಳ.** ಇಲ್ಲಿ ದೇವರು ಜನರನ್ನು ಯಾಜಕರ ಮೂಲಕ ಸಂಧಿಸುತ್ತಿದ್ದನು. | **ಪರಲೋಕ.** ಯೇಸು ಪರಲೋಕಕ್ಕೆ ಏರಿದ ನಂತರ, ಆತನ ಅನುಯಾಯಿಗಳು ಸಹ, ದೇವ ಸನ್ನಿಧಿಗೆ ಪ್ರವೇಶಿಸುವ ಅವಕಾಶವಾಯಿತು. |
| **ಮಹಾಯಾಜಕ.** ವರ್ಷಕೊಮ್ಮೆ ಮಾತ್ರ ದೇವ ಸನ್ನಿದಿಗೆ ಹೋಗುತ್ತಿದ್ದನು. | **ಕ್ರಿಸ್ತನು.** ಉತ್ತಮವಾದ ಮಹಾಯಾಜಕನು ತನ್ನ ಸ್ವಂತ ರಕ್ತವನ್ನು ತೆಗೆದುಕೊಂಡು ಪರಲೋಕಕ್ಕೆ ಒಂದೇ ಸಾರಿಹೋದನು. |
| **ಪಶುಗಳ ರಕ್ತ.** ಧರ್ಮಶಾಸ್ತ್ರದ ಪ್ರಕಾರ, ಪಶುಗಳ ರಕ್ತವನ್ನು ಯಜ್ಞವಾಗಿ ಸಮರ್ಪಿಸಬೇಕಿತ್ತು. | **ಕ್ರಿಸ್ತನ ರಕ್ತ.** ಶಿಲುಬೆಯ ಮರಣದ ಮುಖಾಂತರ ಪಾಪವನ್ನು ನಿತ್ಯವಾಗಿ ನಿರ್ಮೂಲನೆ ಮಾಡಿದನು. |

ಇಬ್ರಿಯ 9:1-14ರಂತೆ, ಹಳೆ ಒಡಂಬಡಿಕೆಯ ಯಜ್ಞಗಳ ಕ್ರಮವು "ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯಾಗಿದ್ದವು" - ಅದು ಯೇಸುವಿನ ಯಜ್ಞಕ್ಕೂ ಸೂಚನೆಯಾಗಿತ್ತು.

9:1-5ರಲ್ಲಿ ದೇವ ದರ್ಶನದ ಗುಡಾರದಲ್ಲಿದ್ದ ದೈಹೀಕವಾದ ಚಟುವಟಿಕೆಗಳ ಏರ್ಪಾಡಿನ ಕ್ರಮವನ್ನು ತಿಳಿಸಲಾಗಿದೆ. (1) ಪರಿಶುದ್ಧ ಸ್ಥಳ; (2) ಪರಿಶುದ್ಧ ಸ್ಥಳದ ಪೀಠೋಪಕರಣಗಳು, ಹಾಗೂ ಪವಿತ್ರ ರೊಟ್ಟಿ; (3) ಅತಿ ಪರಿಶುದ್ಧ ಸ್ಥಳ; ಮತ್ತು (4) ಅತಿ ಪರಿಶುದ್ಧ ಸ್ಥಳದಲ್ಲಿನ ಪಿಠೋಪಕರಣಗಳು, ಹಾಗೂ ಧೂಪವೇದಿ[3] ಹಾಗೂ ಕೆರೂಬಿಗಳಿಂದ ಅಲಂಕೃತಗೊಂಡ ಕೃಪಾಸನದ ಮಂಜೂಷವೂ ಇತ್ತು.

9:5ರ ಪ್ರಕಾರ ಈ ವಸ್ತುಗಳ ಕುರಿತ ಹೆಚ್ಚಿನ ಸಂಕೇತಗಳನ್ನು ಹೇಳಬಹುದು. ಆದರೆ ಹೊಸ ಸಂಗತಿಗಳ ಬಗ್ಗೆ, ಹಳೆ ಸಂಗತಿಗಳು ನೀಡಿದ ಮೇಲುಗಳ ಛಾಯೆಯನ್ನು ಮಾತ್ರ ಗಮನಿಸುತ್ತೇವೆ. ಕೆಲವು ಹೋಲಿಕೆಗಳಿಗಾಗಿ ಮುಂದಿನ ಚಾರ್ಟನ್ನು ನೋಡಿರಿ.

ಇಬ್ರಿಯ 9ರಲ್ಲಿ, ದೇವದರ್ಶನ ಗುಡಾರದ ಕುರಿತ ಹೆಚ್ಚಿನ ವಿವರಗಳನ್ನು ನೀಡಿ ರುವದಿಲ್ಲ. 9:6-10ರಲ್ಲಿ, ಆ ಧರ್ಮಶಾಸ್ತ್ರದ ಛಾಯೆಯಲ್ಲಿನ ಯಜ್ಞದ ಕ್ರಮದ ಕುರಿತಾಗಿ ಮುಂದುವರೆಸಲಾಗಿದೆ.

**ಈ ಯಜ್ಞಗಳ ಕ್ರಮದಲ್ಲಿ ಜರುಗಿದ ಸಂಗತಿಗಳೇನು?**

ಧರ್ಮಶಾಸ್ತ್ರದ ದಿವಸಗಳಲ್ಲಿ, ಯಾಜಕನು ಅತಿ ಪರಿಶುದ್ಧ ಸ್ಥಳಕ್ಕೆ ಕ್ರಮವಾಗಿ ಹೋಗುತ್ತಿದ್ದನು (9:6). ಕ್ಷಣಕಾಲ ಯೋಚಿಸಿ, ಈ ದಿನದಲ್ಲಿರುವ ಕ್ರೈಸ್ತರು ದೇವರಿಗೆ ಕ್ರಮಬದ್ಧವಾದ ಯಜ್ಞಗಳನ್ನು ಅರ್ಪಿಸುವ ಹೊಣೆಯನ್ನು ಹೊಂದಿರುವರಲ್ಲವೇ. ವಚನಗಳು 8, 9ರ ಪರಿಸ್ಥಿತಿಯಲ್ಲಿ, "ಪರಿಶುದ್ಧ ಸ್ಥಳಕ್ಕೆ ಹೋಗುವ ಮಾರ್ಗವು ತೆರೆದಿತ್ತು. ಧರ್ಮಶಾಸ್ತ್ರದ ಪ್ರಕಾರ ಪರಲೋಕದ ದ್ವಾರವು ತೆರದಿರಲಿಲ್ಲ." ಮಹಾ ಯಾಜಕನು ಮಾತ್ರ ವರ್ಷಕ್ಕೊಂದು ಸಾರಿ ಅತಿಪರಿಶುದ್ಧ ಸ್ಥಳವನ್ನು ಪ್ರವೇಶಿಸುತ್ತಿದ್ದನು. ಅವನು ಪಶುಗಳ ರಕ್ತವನ್ನು ತೆಗೆದುಕೊಂಡು ಹೋಗುತ್ತಿದ್ದನು (9:7).

ಈ ಯಜ್ಞಗಳಲ್ಲಿ ಇದ್ದಂಥ ತೊಡಕುಗಳೇನು? ವಚನ 9 ಹಾಗೂ 10ರಲ್ಲಿ, ಈ ಯಜ್ಞಗಳು ಪರಿಪೂರ್ಣವಾಗಿರಲಿಲ್ಲ, ಅವುಗಳು ಪಾಪಗಳನ್ನು ನಿವಾರಣೆ ಮಾಡಲು ಸಾಧ್ಯವಾಗಲಿಲ್ಲ ಎಂದು ಬರಹಗಾರನು ತಿಳಿಸಿರುವನು (ಆರಾಧಿಸುವವರನ್ನು ಪೂರ್ಣ ಮಾಡಲು ಸಾಧ್ಯವಿಲ್ಲ).

9:11-14ರಲ್ಲಿ, ನಮ್ಮ ದೃಷ್ಟಿಯು, ಛಾಯೆಯಿಂದ ವಾಸ್ತಾವಾಂಶಕ್ಕೆ ತಿರುಗಿದೆ ಅಂದರೆ ಯಾಜಕ ವಂಶದ ಯಜ್ಞದ ಕ್ರಮಗಳನ್ನು ಗಮನಿಸುತ್ತೇವೆ.[4]

**ಈಗ ಏನು ಜರುಗುತ್ತದೆ?**

ಈಗ ಧರ್ಮಶಾಸ್ತ್ರವು ಇಲ್ಲದೆ ಇರುವದರಿಂದ, ಜನರು ಬೇರೆ ವಿಧಧ ಆರಾಧನೆಯನ್ನು ಮಾಡಬೇಕಾಗಿದೆ. (1) ಮೋಶೆಯ ನಿಯಮದ ಪ್ರಕಾರ, ಮಹಾ ಯಾಜಕನ ಅಗತ್ಯತೆಯಿತು; ಆದರೆ ಈಗ ಯೇಸು ಕ್ರಿಸ್ತನೇ ನಮಗೆ ಮಹಾಯಾಜಕನಾಗಿದ್ದಾನೆ (9:11). (2) ಧರ್ಮಶಾಸ್ತ್ರದ ಪ್ರಕಾರ ದೇವದರ್ಶನದ ಗುಡಾರವಿತ್ತು; ಆದರೆ ಈಗ "ಪರಿಪೂರ್ಣ ಹಾಗೂ ಮಹತ್ತರವಾದ ಗುಡಾರವಿದೆ" (9:11). (3) ಮೋಶೆಯ ಯುಗದಲ್ಲಿ, ("ಪರಿಶುದ್ಧ ಸ್ಥಳವಿತ್ತು" 9:12 ರಲ್ಲಿ ಮಹಾ ಪರಿಶುದ್ಧ ಸ್ಥಳ ಎಂದಿದೆ). ಯೇಸು ಆ ಪರಿಶುದ್ಧವಾದ ಸ್ಥಳದ ಮೂಲಕ ಪರಲೋಕಕ್ಕೆ ಏರಿ ಹೋದನು. (4) ಧರ್ಮಶಾಸ್ತ್ರದ ಪ್ರಕಾರ ಯಜ್ಞಗಳನ್ನು ಸಮರ್ಪಿಸಬೇಕಿತು; ಹೊಸ ಕರಾರಿನ ಪ್ರಕಾರ ಕ್ರಿಸ್ತನ ರಕ್ತವನ್ನು ಅರ್ಪಿಸಲಾಯಿತು (9:12). (5) ಹಿಂದಿನ ಯುಗದಲ್ಲಿ ಪದೇ ಪದೇ ಯಜ್ಞವನ್ನು ಅರ್ಪಿಸುತ್ತಿದ್ದರು; ಕ್ರಿಸ್ತನ ಕಾಲದಲ್ಲಿ "ಒಂದೇ ಸಾರಿ" ಒಂದು ಯಜ್ಞವನ್ನು ಸಮರ್ಪಿಸಲಾಯಿತು (9:12).

*ಅದರ ಪರಿಣಾಮವೇನು?* ಕ್ರಿಸ್ತನ ಸಮರ್ಪಣೆಯ ಮೂಲಕ, ನಿತ್ಯ ರಕ್ಷಣೆಯು ಪ್ರಾಪ್ತಿಯಾಯಿತು (9:12). ಹಳೆ ಒಡಂಬಡಿಕೆಯು ಒಂದು ಸಂಗತಿಯನ್ನು ಸಾಧಿಸಿದರೆ, (ಸಂಸ್ಕಾರದ ಶುದ್ಧತೆ 9:13), ಹೊಸದು ಎಲ್ಲವನ್ನು ಸಾಧಿಸಿರುತ್ತದೆ (ನಿಜವಾದ ಶುದ್ಧತೆ 9:14). ನಾವು ಆತನಿಗೆ ಸೇವೆ ಮಾಡುವ ಪರಿಣಾಮವು ಉಂಟಾಯಿತು (9:14).

## ಖಾಯಂ ಆದ ಒಡಂಬಡಿಕೆ

ಇಬ್ರಿಯ 9:15-21ರಲ್ಲಿ, ಹಳೆ ಒಡಂಬಡಿಕೆಯ ಮತ್ತೊಂದು ಛಾಯೆಯನ್ನು ನೋಡುತ್ತೇವೆ. ಹಳೆಯದರ ಛಾಯೆಯು ಹೊಸದರ ಖಾಯಂ ಕರಾರಾಗಿದೆ.

ಪಶುಗಳ ರಕ್ತವು ಸಾಧಿಸಲಾರದ್ದನ್ನು ಕ್ರಿಸ್ತನ ರಕ್ತವು ಸಾಧಿಸಿದೆ; ದೇಹವನ್ನು ಮಾತ್ರವಲ್ಲದೆ, ಅದು ಮನಸ್ಸಾಕ್ಷಿಯನ್ನು ಶುದ್ಧ ಮಾಡುತ್ತದೆ ಇನ್ನು ಯಾವ ಪರಿಣಾಮವನ್ನು ಹೊಂದಿದೆ? 9:15ರ ಪ್ರಕಾರ ಮೊದಲ ಒಡಂಬಡಿಕೆಯ ಪ್ರಕಾರ ದೋಷವುಳ್ಳವರನ್ನು ಹೊಸ ಒಡಂಬಡಿಕೆಯ ಯೇಸು ಕ್ರಿಸ್ತನು ಮಧ್ಯಸ್ಥಗಾರನಾಗಿ ಶುದ್ಧಿಮಾಡುತ್ತಾನೆ.

ಆತನು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದರೆ, ಆತನ ಮರಣವು ಯಾವ ವಿಧವಾದ ಸಂಬಂಧವನ್ನು ಹೊಂದಿರುತ್ತದೆ? ಮರಣ ಶಾಸನವು ಮರಣವಾದ ಮೇಲೆ ನಡೆಯುವದೇ ಹೊರತು ಬರೆಯಿಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವದಿಲ್ಲ (9:16, 17).[5]

ಮುಖ್ಯಾಂಶಗಳನ್ನು ಊರ್ಜಿತಗೊಳಿಸಲು ಹಳೆಯ ಒಡಂಬಡಿಕೆಯ ಉದಾಹರಣೆಗಳನ್ನು ಪುನರಾವರ್ತಿಸಲಾಗಿದೆ. ಮೊದಲ ಒಡಂಬಡಿಕೆಯು ರಕ್ತದಿಂದ ಸ್ಥಾಪಿತವಾಯಿತು (9:18-21). ವಿಮೋಚನಕಾಂಡದ ಪ್ರಕಾರ, ಜನರು ದೇವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು (ವಿಮೋಚನಕಾಂಡ 19). ತರುವಾಯ ದೇವರು ಅವರಿಗೆ ಆಜ್ಞೆಗಳನ್ನು ನೀಡಿದನು (ವಿಮೋಚನಕಾಂಡ 20-23). ಧರ್ಮಶಾಸ್ತ್ರವನ್ನು ಓದಿದಾಗ, ಜನರು ಅದಕ್ಕೆ ಒಪ್ಪಿಕೊಳ್ಳುತ್ತಿದ್ದರು. ಅವರು ಅದನ್ನು ಒಪ್ಪಿದರು ಎಂಬ ಸೂಚನೆಗಾಗಿ, ಜನರು ರಕ್ತವನ್ನು ಚಿಮುಕಿಸುತ್ತಿದ್ದರು (ವಿಮೋಚನಕಾಂಡ 24:8). ಅದು ಒಪ್ಪಂದದ ಅಂತಿಮ ಕ್ರಮವಾಯಿತು. ಆ ದಿನದಿಂದ ದೇವರು ಮತ್ತು ಸಹ ರಕ್ತದ ಕ್ರಯದಿಂದ ಉಂಟಾದ ಒಡಂಬಡಿಕೆಗೆ ಒಳಪಟ್ಟಿದ್ದೇವೆ (ಮತ್ತಾಯ 26:28). ಕ್ರಿಸ್ತನ ಶಿಲುಬೆಯ ಮರಣದ ರಕ್ತದಿಂದ ಕ್ರಿಸ್ತನು ನಮ್ಮೊಂದಿಗೆ ಒಡಂಬಡಿಕೆಯನ್ನು ಸ್ಥಾಪಿಸಿರುವನು.

ಇಬ್ರಿಯ 9:21-28ರಲ್ಲಿ, ಹೊಸ ಒಡಂಬಡಿಕೆಯ ಶುದ್ಧಿಕರಣವು, ಹಳೆಯದರ ನೆರಳು ಎಂದು ನೋಡುತ್ತೇವೆ.

ಮೊದಲನೆಯದಾಗಿ, ವಚನ 21 ಮತ್ತು 22 ರಲ್ಲಿ, ದೇವದರ್ಶನದ ಗುಡಾರದ ಶುದ್ಧಿಕರಣದಲ್ಲಿ, ರಕ್ತವನ್ನು ಸುರಿಸಲಾಗಿತ್ತು. ರಕ್ತಧಾರೆಯಿಲ್ಲದೆ ಪಾಪಪರಿಹಾರವಿರಲಿಲ್ಲ.

ಎರಡನೆಯದಾಗಿ, ದೇವದರ್ಶನದ ಒಳಗಿನ ಸಂಗತಿಗಳು ಪರಲೋಕ ಸಂಗತಿಗಳ ಅನುರೂಪವಾಗಿತ್ತು (9:23). ಅದರಲ್ಲಿರುವ ಸತ್ಯಾಂಶಗಳೇನು? ಹೊಸ ಒಡಂಬಡಿಕೆಯು ಪ್ರಕಾರ - ಸಭೆ ಹಾಗೂ ಆರಾಧನೆ ಅದರ ನಿದರ್ಶನಗಳಾಗಿವೆ.

ಮೂರನೆಯದಾಗಿ, ಉತ್ತಮವಾದ ಯಜ್ಞಗಳಿಂದ ನಿಜವಾದ ಶುದ್ಧೀಕರಣ ಉಂಟಾಗುತ್ತದೆ. ಆದ್ದರಿಂದ ನಾವು ಅದನ್ನು ಬಿಟ್ಟುಬಿಡಬಾರದು (ಮುಖ್ಯವಾಗಿ ಇಬ್ರಿಯ ಪತ್ರಿಕೆಯ ಮೊದಲಿನ ಓದುಗರು, ಯುದಾ ಮತಕ್ಕೆ ಹಿಂದಿರುಗಬಾರದಿತ್ತು). ನಂತರ ನಾವುಗಳು ಕೃತಜ್ಞರಾಗಿರಬೇಕು. ನಮಗಾಗಿ ತನ್ನ ಸ್ವಂತ ರಕ್ತವನ್ನು ತ್ಯಾಗಮಾಡಿ ಪರಲೋಕಕ್ಕೆ ಏರಿ ಹೋದ ಆ ಮಹಾಯಾಜಕನಿಗಾಗಿ ಕೃತಜ್ಞರಾಗಿರ ಬೇಕು. ಆ ರಕ್ಷಣೆಯು, ನಮಗಾಗಿ ಈ ದಿನವೂ ಲಭ್ಯವಿದೆ.

ಈ ವಾಕ್ಯಭಾಗದ ಪಾಠವೇನು? ನಮಗೆ ಉತ್ತಮವಾದ ಒಡಂಬಡಿಕೆಯಿದೆ, ಆ ಒಡಂಬಡಿಕೆಯಲ್ಲಿ ಉತ್ತಮವಾದ ಯಜ್ಞದಿಂದ ಪವಿತ್ರರಾಗಿದ್ದೇವೆ. ಆದ್ದರಿಂದ ಅದನ್ನು ಬಿಟ್ಟುಬಿಡಬಾರದು (ಪ್ರತ್ಯೇಕಿಸಿ ಪತ್ರಿಕೆಯ ಓದುಗರರು ಯೂದ ಮತಕ್ಕೆ ಹಿಂತಿರುಗಬಾರದು). ನಾವು ಎಷ್ಟೊ ಕೃತಜ್ಞತರಾಗಿದ್ದೇವೆ. ಏನು ಅರಿತುಕೊಳ್ಳಬೇಕೊ ಅದನ್ನು ಅರಿತುಕೊಂಡು ನಾವು ಮೋಶೆಯ ಧರ್ಮಶಾಸ್ತ್ರದ ಕೆಳಗೆ ಇಲ್ಲವೆಂದು ಆನಂದಿಸಬೇಕು. ನಮಗೆ ಮಹಾಯಾಜಕನು ಒಬ್ಬನಾಗಿರದೆ, ನಮಗಾಗಿ ಮರಣವನ್ನು ಹೊಂದಿ ತನ್ನ ಸ್ವಂತ ರಕ್ತವನ್ನು ಪರಲೋಕಕ್ಕೆ ಕೊಂಡೊಯೊದ್ದರಿಂದ ನಾವು ದೇವರಿಗೆ ಕೃತಜ್ಞತರಾಗಿರಬೇಕು ಈಗ ರಕ್ಷಣೆಯು ನಮ್ಮದಾಗಿದೆಯೆಂದು ಆನಂದಿಸೋಣ.

## ಮುಕ್ತಾಯ

ಅಧ್ಯಾಯ 9ನ್ನು ವಚನ 27 ಹಾಗೂ 28ರಲ್ಲಿ ಕ್ರಮಬದ್ಧವಾಗಿ ಅಂತ್ಯಗೊಳಿಸಲಾಗಿದೆ. ಯೇಸುವಿನ ಅನುಭವವನ್ನು ಮಾನವರ ಅನುಭವದಲ್ಲಿ ಬಳಸಲಾಗಿದೆ. ಮನುಷ್ಯನು ಒಂದು ಸಾರಿ ಸಾಯಬೇಕು, ನಂತರ ತೀರ್ಪು ಬರುತ್ತದೆ. ಹಾಗೆಯೇ ಯೇಸುವಿನ ಮರಣದ ನಂತರ ನ್ಯಾಯತೀರ್ಪು ಉಂಟಾಯಿತು (ಎರಡನೇ ಬರೋಣದಲ್ಲಿ) ಆತನ ಬರೋಣವು ನಿಶ್ಚಯವಾಗಿರುವದರಿಂದ, ಆತನಿಗಾಗಿ ಕಾದಿರುವೆಯೋ?

---

ಟಿಪ್ಪಣಿಗಳು

[1]ಮೇಲುಗಳು ಅಂದರೆ ಹೊಸ ಒಡಂಬಡಿಕೆ. ಅವುಗಳು ಈಗಾಗಲೇ ಬಂದಿವೆ. [2]9:9, 11, 23, 24. [3]ಧೂಪವೇದಿಯು ಪರಿಶುದ್ಧ ಸ್ಥಳದಲ್ಲಿ ಇತ್ತು; ಆದರೆ ಇಲ್ಲಿ ಅತಿ ಪರಿಶುದ್ಧ ಸ್ಥಳದಲ್ಲಿ ಧೂಪವೇದಿ ಯಿತ್ತೆಂದು ಹೇಳಲಾಗಿದೆ. ಏಕೆಂದರೆ ಧೂಪವು ಧೂಪವೇದಿಯಿಂದ ಅತಿ ಪರಿಶುದ್ಧ ಸ್ಥಳದೊಳಗೆ ಹೊಯಿತು. [4]ಎರಡು ಒಡಂಬಡಿಕೆಗಳ ಯಜ್ಞಗಳು ಎಲ್ಲಿ ಅರ್ಪಿತವಾದವೊ ಎಂಬುದರ ಬಗ್ಗೆ ಇರುವ ವ್ಯತ್ಯಾಸವನ್ನು ಗಮನಿಸಿ (ವಚನ 11), ಅರ್ಪಣೆಯನ್ನು ಯಾರು ಅರ್ಪಿಸಿದರೋ (ವಚನ 11), ಯಜ್ಞದ ತರಗಳು (ವಚನ 12), ಮತ್ತು ಅದರ ಪರಿಣಾಮಗಳು (ವಚನ 9ಬಿ, 13-15).

| ಹೊಸದು (ವಾಸ್ತವಾಂಶ) | ಹಳೆಯದು (ಛಾಯೆ) |
|---|---|
| ಕ್ರಿಸ್ತನು ಪ್ರವೇಶಿಸಿದನು (9:24). | ಮಹಾಯಾಜಕನು (9:25). |
| ನಿಜವಾದ ಸನ್ನಿಧಿ (9:24). | ಕೈಯಿಂದ ನಿರ್ಮಿಸಿದ ದೇವ ದರ್ಶನದಗುಡಾರ ನಿಜವಾದ ದೇವಾಲಯದ ಅನುರೂಪ (9:24). |
| ಒಂದೇ ಸಾರಿ (9:12, 28). | ಪದೇ ಪದೇ (9:25; 10:1). |
| ಕ್ರಿಸ್ತನ ಸ್ವಂತ ರಕ್ತ (9:26). | ಸ್ವಂತ ರಕ್ತವಲ್ಲ (9:25). |

*ಹೊಸ ಒಡಂಬಡಿಕೆಯ ಯಜ್ಞಗಳನ್ನು, ಹಳೇ ಒಡಂಬಡಿಕೆಯಲ್ಲಿ ಮುಂತಿಳಿಸಲಾಗಿತ್ತು*